ಮಳೆ ವಿಶೇಷ

ಛಾಯಾ ಭಗವತಿ

# ಮಳೆಯ ದಿನ ಹಾಡಿನ ತನನ

ಗಗನದಲಿ ಮಳೆಯ ದಿನ ಗುಡುಗಿನ ತನನಾ, ಆ ತನನದಲಿ ಧರಣಿಯಲಿ ಹಸುರಿನ ಝುನನಾ

ಮಲೆನಾಡಿನಾ ಮಳೆಹಾಡಿನಾ ಪಿಸುಮಾತಿನಾ...

ಅಂತ ಆ ಬೆಕ್ಕಿನ ಕಣ್ಣಿನ ಸುಂದರಿ ಮೋಹಿನಿ ಪರದೆಯ ಮೇಲೆ ಆ ಲಂಗ ದಾವಣಿ ತೊಟ್ಟು, ಕುಣಿಯುತ್ತ ಹಾಡಿದ್ದೇ ಬಂತು, ಅದು ಎಂಥ ಸುಂದರ ಘಳಿಗೆಯೋ, ಮಳೆ ಸೃಷ್ಟಿಸುವ ಭಾವಲೋಕವನ್ನು 'ಗುಡುಗಿನ ಸೇರೊದ್ದು ಒಳಬಂದ ಮದುಮಗಳಂತಿದ್ದ' ಹಾಡನ್ನು ನಾನು ನನ್ನ ಮನತುಂಬಿಸಿಕೊಂಡಿದ್ದೆ. ಹಗರಿಬೊಮ್ಮನಹಳ್ಳಿ ಎಂಬ ನನ್ನ ಪಾಲಿನ 'ಆಮ್ಚೀ ಮುಂಬಯಿ'ಯಲ್ಲಿ ನನ್ನ ಎಳವೆಯ ಶಾಲಾಬದುಕು ಆಗಷ್ಟೇ ಉದ್ಘಾಟನೆಗೊಂಡಿದ್ದಕ್ಕೂ, ಶ್ರೀರಾಮಚಂದ್ರ ಎಂಬ ಈ ಸಿನುಮಾ ಹೊಸ ಊರಿನ ಟಾಕೀಸಿನಲ್ಲಿ 'ವಚ್ಚವಸದಾಗಿ' ಓಪನಿಂಗು ಆಗಿದ್ದಕ್ಕೂ ನ್ಯಾರಾಗಿ, ಏನು ಕೇಳೀರಿ ಆ ಚೆಂದವಾ!

ಆರನೇ ಕ್ಲಾಸಿನ ನಾವು ನಾಕಾರು ಪೋರಿಯರು ಆ ಹಿಂದಲ ಎರಡು ವರ್ಷಗಳಲ್ಲಿ ಹೆಣ್ಣುಮಕ್ಕಳ ಹುಚ್ಚೆಬ್ಬಿಸಿದ್ದ ರಾಮಾಚಾರಿಯ ಸಿನಿಮಾಗಳ ಪಕ್ಕಾ ವೀಕ್ಷಕರಾಗಿ ಹೋಗಿದ್ದೆವು. ಎರಡು ರೂಪಾಯಿಗೆ ಟೆಂಟು. ಅದು ನನಗೆ ಯಾವ ಬಾಲ್ಕನಿಗೂ ಕಮ್ಮಿ ಇರಲಿಲ್ಲ. ಅಂಥದ್ದರಲ್ಲಿ ಈ ಸಿನಿಮಾವನ್ನು ಥೇಟು ಬಾಲ್ಕನಿಯಲ್ಲೇ ಕುಂತು ನೋಡಿ, ಪುಳಕಗೊಂಡು ತೆರೆಯ ಮೇಲೂ, ಕಣ್ಣೊಳಗೂ ಒಂದೇ ಸಮನೆ ಮುಸಲಧಾರೆ ಸುರಿದದ್ದನ್ನು ಹೇಗೆ ಮರೆಯಲಾದೀತು!

ಅಲ್ಲಿಂದ ಶುರುವಾದ ಆ ಮಳೆಗಾಲದಲ್ಲಿ ಅಜಮಾಸು ಆರು ಕಿಲೋಮೀಟರು ಹೋಗುತ್ತಲೂ ಬರುತ್ತಲೂ ನಡೆದುಕೊಂಡು ಶಾಲೆಸೇರಬೇಕಾಗಿದ್ದರಿಂದ, ಜೂನಿನಿಂದ ಮಳೆಗಾಲ ನಿಲ್ಲುವತನಕ ಚತ್ರಿಯನ್ನು ಬಿಟ್ಟು ತೊಟ್ಟಿನ ಚೀಲ, ಬ್ಯಾಗಡಿ ಹಾಳಿ, ದಪ್ಪನ ರಟ್ಟು ಏನೂ ಕೂಡಾ ನಮ್ಮ ನಮ್ಮ ತಲೆಗಳನ್ನು ಮರೆಮಾಡಿ ಮೈ ತೋಯಿಸಿಕೊಂಡರೂ, ನೆತ್ತಿಗೆ ನೀರು ಬಿದ್ದು ನೆಗಡಿಯಾಗದಂತೆ ನಮ್ಮ ನಾವೇ ಪೊರೆದುಕೊಳ್ಳುತ್ತಿದ್ದೆವು. ಟಾರುರೋಡಿನ ಸೌಕರ್ಯಗಳಿರದ ಊರುಗಳಲ್ಲಿ ಮಳೆಯಲ್ಲಿ ಬದುಕು ಮಾಡಿಕೊಳ್ಳಬೇಕಾದ ಅನಿವಾರ್ಯತೆಗಳಿದ್ದರೆ, ಯಾವ ಇಂಗ್ಲೆಂಡಿನ ರಾಣಿಯ ಕಿರೀಟವನ್ನೂ ಮೀರಿಸುವ ಬೇಡಿಕೆ ಬರುವುದು ನಮ್ಮ ಗೋಣೀಚೀಲಗಳಿಗೆ. ಒಂದು ಆಕಾರದಲ್ಲಿ ಮಡಚಿಕೊಂಡು ತಲೆಯ ಮೇಲೆ ಹೊದ್ದರೆ ಆಯಿತು, ಸಿಂಬಿಗೆ ಸಿಂಬಿ, ಚತ್ರಿಗೆ ಚತ್ರಿ. ಚೀಲದೊಳಗಿನ ಬುಕ್ಕುಗಳು ತೋಯುವಷ್ಟು ಮಳೆ ಸುರಿಯಿತೆಂದರೆ ಎಲ್ಲ ಬರವಣಿಗೆಯ ಕೆಲಸಕ್ಕೂ ಮಾಫಿ ಸಿಕ್ಕಿ, ಬರಿಯ ಓದುವ ಸುಖದ ಸವಲತ್ತು.

